ಮ್ಯೂನಿಕ್ಕಿನಲ್ಲಿ ಆಂಧ್ರದ ಕುಟುಂಬದವರು ತಯಾರಿಸುವ ಬಿರಿಯಾನಿ ತರಿಸಿದ್ದೆವು. ಬಾಯಿಕೆಟ್ಟಿದ್ದ ನಮಗೆ ಅದರ ಖಾರಖಾರ ಹಿತಕೊಟ್ಟಿತು.

ನಾವು ಹೋದಲ್ಲೆಲ್ಲ ಕಿಚನ್ನುಳ್ಳ ಏರ್‌ಬಿಎನ್‌ಬಿ 'ಮನೆ'ಗಳನ್ನೇ ಬುಕ್ ಮಾಡಿದ್ದರಿಂದ, ಸಾಧ್ಯವಾದಷ್ಟೂ ಅಡುಗೆ ಮಾಡಿಕೊಳ್ಳುತ್ತಿದ್ದೆವು. ಹೀಗಾಗಿ ಸ್ಥಳೀಯ ಬೇಕರಿಗಳಿಗೆ, ಮಾರುಕಟ್ಟೆ ಅಂಗಡಿಗಳಿಗೆ ಹೋಗಬೇಕಾಗುತ್ತಿತ್ತು. ಅಂಗಡಿಗಳಲ್ಲಿ ಬದನೆ, ನವಿಲಕೋಸು, ಬಟಾಣಿ ಬೀನ್ಸ್, ಎಲೆಕೋಸು, ಕ್ಯಾರೆಟ್, ಮೂಲಂಗಿ, ಹೂಕೋಸು, ಗೆಣಸು, ಸೌತೆ, ಡೊಣಮೆಣಸು, ಟೊಮ್ಯಾಟೊ, ನೀರುಳ್ಳಿ ಕಂಡವು. ಬೆಂಡೆ, ತೊಂಡೆ, ಸೋರೆ, ಜವಳಿ, ಹಾಗಲ, ಹೀರೆ ಕಾಣಲಿಲ್ಲ. ನನಗೆ ಇಷ್ಟವಾಗಿದ್ದು ಗಿಡ್ಡನೆಯ ಕೆಂಪುಮೂಲಂಗಿ. ಗೌರಿ–ಲತಾ ಮಾಡುತ್ತಿದ್ದ ಬೇಳೆ–ಮೂಲಂಗಿ ಸಾಂಬಾರು ಕಮ್ಮಗಿರುತ್ತಿತ್ತು. ಶೀತ ಪ್ರದೇಶವಾದ್ದರಿಂದ ಹೂವು ಹಣ್ಣು ತರಕಾರಿಗಳು ತಾಜಾತನದಿಂದ ಸದಾ ಥಳಥಳಿಸುತ್ತಿರುತ್ತವೆ. ಆದರೂ ನಮಗೆ ಹೋಲಿಸಿದರೆ ಆಹಾರದಲ್ಲಿ ವೈವಿಧ್ಯವಿಲ್ಲ. ಸಸ್ಯಾಹಾರಿಗಳಿಗೆ ಆಯ್ಕೆಗಳೇ ಕಡಿಮೆ. ವ್ಯಂಗ್ಯವೆಂದರೆ ಜರ್ಮನಿಯನಾಳಿದ ಹಿಟ್ಲರ್ ಸಸ್ಯಾಹಾರಿಯಾಗಿದ್ದ. ಹಿಂಸೆ–ಅಹಿಂಸೆಯ ಪ್ರತೀಕಗಳಾದ ಹಿಟ್ಲರ್–ಗಾಂಧಿ ಇಬ್ಬರೂ ಸಸ್ಯಾಹಾರವಾದಿಗಳಾಗಿದ್ದರು. ಸಮಸ್ಯೆ ಸಸ್ಯಾಹಾರಿಗಳದ್ದಲ್ಲ; ಮಾಂಸ ತಿನ್ನುವುದು ರಾಕ್ಷಸೀಗುಣ ಎನ್ನುವ ಸಸ್ಯಾಹಾರವಾದದ್ದು. ಬೆಂಗಳೂರಿನಲ್ಲಿ ಈಚೆಗೆ ಶುದ್ಧ ಸಸ್ಯಾಹಾರದ ಹೋಟೆಲನ್ನು ಕಂಡೆ. ಅಲ್ಲಿ ಕಾಫಿಯನ್ನು 'ತಾಮಸ' ಗುಣವುಳ್ಳದ್ದಾದರಿಂದ ಒಳಗೆ ಸರ್ವ್ ಮಾಡಲಾಗುವುದಿಲ್ಲ ಎಂದು ಬೋರ್ಡು ಹಾಕಿದ್ದರು. ಕಾಫಿಯನ್ನು ದೂರ ಹೊರಗಿಡಲಾಗಿತ್ತು. ಅಸ್ಪೃಶ್ಯತೆ–ಮೂಲಭೂತವಾದಗಳು ಆಹಾರ ಸಂಸ್ಕೃತಿಗೂ ಆಳವಾದ ಸಂಬಂಧಗಳಿವೆ.

ಜರ್ಮನಿಯಲ್ಲಿ ನಮ್ಮಲ್ಲಿರುವಂತೆ ಹೆಜ್ಜೆಗೊಂದು ರೆಸ್ಟೊರೆಂಟುಗಳಿಲ್ಲ. ಬೇಕರಿಗಳಿವೆ. ಅದರಲ್ಲೂ ಜರ್ಮನ್ ಬೇಕರಿಗಳು ಲೋಕವಿಖ್ಯಾತವಾದವು. ನಾವು ತಿರುಗಾಡಲು ಹೋಗುವಾಗೆಲ್ಲ 'ರಿಶ್ಚಾರ್ಟ' ಬೇಕರಿಗಳಲ್ಲೇ ಖರೀದಿಸುತ್ತಿದ್ದೆವು. ಅದರಲ್ಲಿ ನೂರು ತರಹದ ತಿನಿಸುಗಳು. ನಾನು ಮಾಂಸ ಮತ್ತು ಸಕ್ಕರೆಯಿಲ್ಲದ ಸೂರ್ಯಕಾಂತಿ ಬೀಜ ಅಂಟಿಸಿದ್ದ ಶಂಖಚಕ್ರಾಕಾರದ ಬ್ರೆಡ್ಡುಗಳನ್ನು ತಿನ್ನುತ್ತ ವಿಷ್ಣು ಅವತಾರಿಯಾಗಿದ್ದೆ. ಕಷ್ಟಕಾಲಕ್ಕಿರಲಿ ಎಂದು ಒಯ್ದಿದ್ದ ತಿಂಡಿಗಳನ್ನು ಎಲ್ಲಿಬೇಕಲ್ಲಿ ಬಿಚ್ಚುತ್ತಿರಲಿಲ್ಲ. ಆದರೂ ನಮ್ಮನ್ನು ಕಂಡೊಡನೆ ದೋಣಿಗರು–ಬಸ್ಸಿಗರು 'ತಿಂಡಿಗಂಟು ಬಿಚ್ಚಬೇಡಿ' ಎಂದು ವಿನಂತಿಸುತ್ತಿದ್ದರು. ಬಿಚ್ಚಿದರೆ ಅವಶೇಷ ಹಾಕಲು ಕವರನ್ನು ದಯಪಾಲಿಸುತ್ತಿದ್ದರು. ಹೋದಲ್ಲೆಲ್ಲ ಬುತ್ತಿಬಿಚ್ಚಿ ಚೆಲ್ಲಾಡುತ್ತಿದ್ದ ಭಾರತೀಯರ ಕಲ್ಯಾಣಗುಣವನ್ನು ಅವರು ಕಂಡಿರಬೇಕು.

ಯೂರೋಪಿನ ಆಹಾರ ವೈವಿಧ್ಯವನ್ನು ಊರಾಚೆ ಹೆದ್ದಾರಿ ಬದಿಯ ರೆಸ್ಟೊರೆಂಟುಗಳಲ್ಲಿ ನೋಡಬೇಕು. ಜರ್ಮನಿ–ಸ್ಲೊವೇನಿಯಾ ಹೆದ್ದಾರಿಯಲ್ಲಿ ಸಿಗುವ ಆಸ್ಟ್ರಿಯಾದ ಒಂದು ಹೆದ್ದಾರಿ ಹೋಟೆಲು, ನೂರಾರು ಬಗೆಯ ಆಹಾರದ ಪ್ರದರ್ಶಿನಿಯಂತಿತ್ತು. ಒಂದೆಡೆ ಅನ್ನವೂ ತಬ್ಬಲಿಯಂತೆ ಇತ್ತು. ನಾವು ಊಟಕ್ಕಾಗಿ ತಡಕಾಡುವಾಗ, ಯೂರೋಪಿಯನ್ ಪ್ರವಾಸಿಗಳು ಏಶಿಯನ್ ರೆಸ್ಟೊರೆಂಟುಗಳಲ್ಲಿ ತುಂಬಿರುತ್ತಿದ್ದರು. ಕೆಲವು ಪುಟ್ಟ ರೆಸ್ಟೊರೆಂಟುಗಳು 'ನಮಸ್ತೆ' ಎಂದು ಹೆಸರಿಟ್ಟುಕೊಂಡಿದ್ದವು. ಆಮಸ್ಟರ್‌ಡ್ಯಾಮಿನಲ್ಲಿ ಬರಗಾಲದಲ್ಲಿ ರೇಶನ್ನಿಗೆ ಜನ ನಿಂತಂತೆ, ಥಾಯಿ ಚೈನೀ ರೆಸ್ಟೊರೆಂಟುಗಳಿಗೆ ಪಾಳಿ ಹಚ್ಚಿದ್ದರು. ಜರ್ಮನಿ, ಸ್ಲೊವೇನಿಯಾ, ಇಟಲಿಗಳಲ್ಲಿ ಟರ್ಕಿ ರೆಸ್ಟೊರೆಂಟುಗಳಿವೆ. ಟರ್ಕಿಯ ಸಾಮ್ರಾಟರು ಶತಮಾನಗಳ ಕಾಲ ಯೂರೋಪಿನ ದೇಶಗಳನ್ನು ಆಳುವಾಗ ಅದರ ಆಹಾರಗಳು ಇಲ್ಲಿಗೆ ವಲಸೆ ಬಂದಿವೆ. ಮ್ಯೂನಿಕ್ಕಿನಲ್ಲಿ ಆಫ್ಘನ್



ಬೇಕರಿ ತಿನಿಸು

ರೆಸ್ಟೊರೆಂಟುಗಳಿದ್ದವು. ಅಕ್ಕಿ ಮಾಂಸ ಮಸಾಲೆ ಪ್ರಧಾನವಾಗಿರುವ ಬಿರಿಯಾನಿ ಅಲ್ಲಿದ್ದು, ಹೆಚ್ಚಾಗಿ ಮುಸ್ಲಿಮ್ ಕುಟುಂಬಗಳು ನೆರೆದಿದ್ದವು. ನಮಗೆ ಇಷ್ಟವಾಗಿದ್ದು ಪ್ಯಾಲೆಸ್ತೇನಿ ರೆಸ್ಟೊರೆಂಟು. ಸ್ಲೊವೇನಿಯಾ ರಾಜಧಾನಿ ಲುಬ್ಲಿಯಾನದಲ್ಲಿದ್ದ ಈ ರೆಸ್ಟೊರೆಂಟಿನಲ್ಲಿ ಸಿಗುತ್ತಿದ್ದ ಫಲಾಫೆಲ್ ತಿಂದೆವು. ಗರಿಗರಿ ಕರಿದ ಮಸಾಲೆವಡೆ, ಹೆಚ್ಚಿದ ಹಸಿ ತರಕಾರಿಗಳನ್ನು ಚಪಾತಿಯಲ್ಲಿ ಸುತ್ತಿ ಮೇಲೆ ಕೆನೆಯಂತಹ ರಸವನ್ನು ಹಾಕಿ ತಯಾರಿಸುವ ಅದ್ಭುತ ತಿನಿಸದು.

ಟರ್ಕಿ ಕಿಚನುಗಳಿಗಿಂತ ಇಟಲಿ ರೆಸ್ಟೊರೆಂಟುಗಳಲ್ಲಿ ಜನಸಂದಣಿ ಇರುತ್ತಿತ್ತು. ಇಟಲಿ ಎಂದರೆ ಸೆಗೆಟ್ಟಿ ಪಾಸ್ತಾ ಪಿಜ್ಜಾ. ಇಟಲಿಯಲ್ಲಿ ನಾವು ಸೇವಿಸಿದ ಮೊದಲನೇ ಪಿಜ್ಜಾ ಯಾಕೊ ಪಸಂದಾಗಲಿಲ್ಲ. ಅಂದು ಮ್ಯೂನಿಕ್ಕಿನಿಂದ ಹೊರಟು ರೋಮ್ ತಲುಪಿ ಕಾದಿರಿಸಿದ್ದ ಮನೆ ಸೇರುವಾಗ ರಾತ್ರಿ ಹತ್ತು ಹೊಡೆದಿತ್ತು. ಅದು ರೋಮ್ ವಿಶ್ವವಿದ್ಯಾಲಯಕ್ಕೆ ಹತ್ತಿರವಿದ್ದ ಪ್ರದೇಶ. ಬೀದಿಬದಿ ಹೋಟೆಲುಗಳಲ್ಲಿ ವಿದ್ಯಾರ್ಥಿಗಳು ರಸ್ತೆಮೇಲೆ ಕುರ್ಚಿ ಹಾಕಿಕೊಂಡು ಬೀರನ್ನು ಹೀರುತ್ತ, ಬತ್ತಿ ಎಳೆಯುತ್ತ, ಹರಟೆ ಹೊಡೆಯುತ್ತ, ಆಗಾಗ್ಗೆ ಮುತ್ತಿಡುತ್ತ, ರಾತ್ರಿ ನಡುವಿಗೆ ಏರುತ್ತಿದ್ದರೂ ಕದಲದೆ ಭೂಮಿಗೆ ಗಂಧರ್ವಲೋಕವನ್ನು ಇಳಿಸಿದ್ದರು. ನಾವು ಸಂದಣಿಯಲ್ಲಿ ನುಗ್ಗಿ ತಿನ್ನಲು ಏನೇನಿದೆ ಕೇಳಿದೆವು. ಅಂಗ್ರೇಜಿ ಬಾರದ ಮಾಲಕಿ ಕಿಚನಿನೊಳಗಿದ್ದ ಬಾಂಗ್ಲಾದೇಶಿ ಅಡುಗೆಯವನನ್ನು ಕರೆದು ವಿಚಾರಿಸಲು ಹೇಳಿದಳು. ಆತನಿಗೆ ಇಟಾಲಿಯನ್ ಬಂಗಾಳಿ ಬಿಟ್ಟು ಬೇರೆನುಡಿ ತಿಳಿಯದು. ಇಂಗ್ಲಿಷಿಗೆ ಸಿಗುತ್ತಿರುವ ಮರ್ಯಾದೆಯಿಂದ ನಮಗೆ ಒಳಗೇ ಸಂತೋಷವೂ ಆಯಿತು. ಕಡೆಗೆ ಜನ ತಿನ್ನುತ್ತಿದ್ದ ಕಡೆ ಕರೆದೊಯ್ದು ಆತನಿಗೆ ಕೆಲವು ತಿಂಡಿ ತೋರಿಸಿದೆವು. ಉಗ್ರ ಸಸ್ಯಾಹಾರಿಯಾದ ಲತಾ, ಪಿಜ್ಜಾದಲ್ಲಿ ಏನೇನು ಹಾಕುವಿರಿ ಎಂದು ಆತಂಕದಿಂದ ಕೇಳಿದರು. ಆಗ ಅಜ್ಜಿಯು ಅಡುಗೆ ಕೋಣೆಯಿಂದ ಸೌತೆ, ಟೊಮ್ಯಾಟೊ, ಬದನೆ ತುಂಬಿದ ಬುಟ್ಟಿಯನ್ನೇ ಎತ್ತಿಕೊಂಡು ಬಂತು. ಅರ್ಧತಾಸು ಕಾದ ಬಳಿಕ ಮಗ್ಗಿನ ತುಂಬ ಕಾಫಿ, ತಾಜಾಬೀರು, ಆಮ್ಲೆಟ್, ಬಿಸಿ ಪಿಜ್ಜಾ ಮೇಜಿನ ಮೇಲೆ ಅವತರಿಸಿದವು. ನಿಜವಾದ ಪಿಜ್ಜಾ ಸವಿದಿದ್ದು ವ್ಯಾಟಿಕನ್ ಶಹರದಲ್ಲಿ. ಸೈಂಟ್ ಬೆಸಿಲಿಕಾ ಚರ್ಚಿನ ಎದುರಿನ ಹೋಟೆಲಿನಲ್ಲಿ. ಕ್ರಿಸ್ತಕರುಣೆ ನಮ್ಮ ಮೇಲಿರಲಿ. ವೆನಿಸಿನಲ್ಲಿ ನಮ್ಮ 'ಮನೆ'ಗೆ ಸಮೀಪವಿದ್ದ ಬೀದಿಬದಿಯ ಪುಟ್ಟ ರೆಸ್ಟೊರೆಂಟಿಗೆ ಮತ್ತೆಮತ್ತೆ ಹೋದೆವು. ಅಲ್ಲಿ ಬಿಸಿಬಿಸಿ ಪಿಜ್ಜಾ ತಿಂದೆವು. ಮಾಲಕನ ಅನುಮತಿ ಪಡೆದು ಅದರ ತಯಾರಿಕೆಯನ್ನು ನೋಡಿದೆವು.

ಕುಡಿತ, ಭೋಜನ, ಭೋಗ, ತಿರುಗಾಟ, ಕ್ರೀಡೆಗಳಿಂದ ಕೂಡಿ ಆಮ್‌ಸ್ಟರ್‌ಡ್ಯಾಂ, ರೋಂ, ವೆನಿಸ್ ಇಂದ್ರನಗರಿಗಳಂತಿವೆ. ಆಮ್‌ಸ್ಟರ್‌ಡ್ಯಾಂನ ಒಂದು ಕಡೆ ಪ್ರವಾಸಿಗರು ಬೆಲ್ಲಕ್ಕೆ ಇರುವೆ ಮುತ್ತಿದಂತೆ ಸೇರಿದ್ದರು. ಅದು ಆಲೂಗೆಡ್ಡೆ ಚೂರುಗಳಿಗೆ ಉಪ್ಪು–ಕಾರ ಹಾಕಿ ಕರಿದು ಪೊಟ್ಟಣದಲ್ಲಿ ತುಂಬಿ, ಮೇಲೆ ಕೆನೆಯಂಥ ರಸ ಹೊಯ್ದು ವಿತರಿಸುವ ಅಂಗಡಿ. ನಾವೂ ಪಾಳಿ ನಿಂತೆವು. ರುಚಿಯಿತ್ತು. ಇಲ್ಲಿನ ಜನ ಬೀದಿಯಲ್ಲಿ ಉಣ್ಣುವುದನ್ನು ನೋಡಿದರೆ ಮನೆಯಲ್ಲಿ ಅಡುಗೆ ಮಾಡುವುದೇ ಕಮ್ಮಿಯೆಂದು ಕಾಣುತ್ತದೆ. ಇವರಿಗೆ ಹೋಲಿಸಿದರೆ ನಮ್ಮ ವನಿತೆಯರು ಬಾಳಿನ ಬಹುತೇಕ ಕಾಲವನ್ನು ಅಡುಗೆ ಮನೆಯಲ್ಲಿ ಕಳೆಯುವರು. ಬಹುಶಃ ಅವರನ್ನು ಅಡುಗೆ ಮನೆಗೆ ಬಂಧಿಸುವುದಕ್ಕೆಂದೇ ಭಾರತೀಯ ಗಂಡಸರು ಆಹಾರಪ್ರಿಯ ಆಗಿರುವಂತಿದೆ. ಇದಕ್ಕೆ ತಕ್ಕಂತೆ ಕೆಲವು ಮಹಿಳೆಯರು ಪುರುಷರನ್ನು ಹಿಡಿತದಲ್ಲಿಟ್ಟುಕೊಳ್ಳುವ ಅಸ್ತ್ರವಾಗಿ ಅಡುಗೆಯನ್ನು ಬಳಸುವರು. ಆಹಾರ ವ್ಯಸನವುಳ್ಳ ಭಾರತೀಯರು ದೇಶೀ ಆಹಾರಕ್ಕಾಗಿ ಫಜೀತಿಪಟ್ಟ ಹಲವಾರು ಕತೆಗಳು ಯೂರೋಪಿನಲ್ಲಿ ಚಾಲ್ತಿಯಲ್ಲಿವೆ. ಒಬ್ಬ